**ಪಿ. ಡಬ್ಲ್ಯೂಃ 1**

**( ಇಂದು ದಿಃ 07/01/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.)**

**ಪಾಟೀ ಸವಾಲು : ಆರೋಪಿ ಪರ ಶ್ರೀ ಪಿ ಜಿ ಎಸ್ ವಕೀಲರಿಂದ,**

ಆರೋೀಪಿಯು ಈ ಮೊದಲು 2 ಬಾರಿ ನಮ್ಮ ಸಂಸೆದಯಿಂದ ಸಾಲ ಪಡೆದಿರುತ್ತಾರೆ. ಪ್ರಸ್ತುತ ಪ್ರಕರಣದ ಸಾಲ ಹೊರತುಪಡಿಸಿ ಯಾವುದೇ ಸಾಲ ಬಾಡಿ ಆರೋಪಿಯಿಂದ ಇಲ್ಲ. ಪ್ರಸ್ತುತ ಸಾಲ ನೀಡುವ ಕಾಲಕ್ಕೆ ಆರೋಪಿಯಿಂದ ನಮ್ಮ ಸಂಸ್ದೆಯಲ್ಲಿ ಯಾವುದೇ ಸಾಲ ಬಾಕಿ ಇರಲಿಲ್ಲ .ಸಾಲ ನೀಡುವಾಗ ಶಾಖೆಯ ಮ್ಯಾನೇಜರ್ ನಾನೇ ಆಗಿದ್ದೆನು. ಸಾಲ ನೀಡಲು ನಾನು ಶಿಪಾರಸ್ಸು ಮಾಡಿರುತ್ತೇನೆ. ಅದರಂತೆ ನಮ್ಮ ಜನರಲ್ ಮ್ಯಾನೇಜರ್ ಸಹ ಸಾಲ ನೀಡಲು ಶಿಪಾರಸ್ಸು ಮಾಡಿರುತ್ತಾರೆ. ಆಡಳಿತ ಸಮೀತಿಯವರು ಸಾಲ ನೀಡುವ ಸಮಯದಲ್ಲಿ ಭದ್ರತೆಗಾಗಿ ಬಾಂಡನ್ನು ಪಡೆಯಲು ಷರತ್ತು ಹಾಕಿದ್ದರು. ನಿಪಿ-6 ವೈಯಕ್ತಿಕ ಸಾಲದ ಅರ್ಜಿಯನ್ನು ನ್ಯಾಯಾಲಯದಲ್ಲಿ ನಾನೇ ಹಾಜರುಪಡಿಸಿದ್ದೇನೆ. ನಿಪಿ-6 ಸಾಲದ ಅರ್ಜಿಯಲ್ಲಿ ಶಾಖೆಯ ವ್ಯವಸ್ಥಾಪಕರು ಮತ್ತು ಪ್ರಧಾನ ವ್ಯವಸ್ಥಾಪಕರು ಇಬ್ಬರೂ ಸಹ ಆರೋಪಿಗೆ ಸಾಲ ನೀಡಲು ಬರುವುದಿಲ್ಲ ಕಾರಣ ಹಿಂದಿನ ಸಾಲ ಬಾಕಿ ಇದೆ ಎಂದು ನಮೂದಿಸಿದಾದರೆ ಎಂದರೆ ಸರಿ. ಒಂದು ವೇಳೆ ಆರೋಪಿಗೆ ಸಾಲ ನೀಡಿದರೆ ಆಡಳಿತ ಮಂಡಳಿಯವರೇ ವೈಯಕ್ತಿಕ ಜವಾಬ್ದಾರರು ಎಂದು ನಮೂದಿಸಿದ್ದಾರೆ ಎಂದರೆ ಸರಿ. ನಿಪಿ-6 ರ ಪ್ರಕಾರ ಆಡಳಿತ ಮಂಡಳಿಯವರು 3 ಷರತ್ತು ಹಾಕಿದ್ದಾರೆ ಎಂದರೆ ಸರಿ. ಸದರಿ ಷರತ್ತುಗಳನ್ನು ನಿಡಿ -1 ಎಂದು ಗುರುತಿಸಲಾಯಿತು. ಸದರಿ ಷರತ್ತಿನಲ್ಲಿ 1 ನೇ ಷರತ್ತು ಸಾಲವನ್ನು ಚೆಕ್ಕು ಮೂಲಕ ನೀಡಬೇಕು, 2 ನೇ ಷರತ್ತು ಭದ್ರತೆಗಾಗಿ ಈ ಎರಡು ಚೆಕ್ಕುಗಳನ್ನು ಪಡೆಯಬೇಕು, 3 ನೇ ಷರತ್ತು ಮೇಲಿನ 2 ಷರತ್ತುಗಳನ್ನು ಪೂರೈಸಿದಲ್ಲಿ ಮಾತ್ರ ಸಾಲವನ್ನು ನೀಡಬೇಕು ಎಂದು ನಮೂದಿಸಿದ್ದಾರೆ ಎಂದರೆ ಚೆಕ್ಕುಗಳನ್ನು ಭದ್ರತೆಗಾಗಿ ಪಡೆಯಬೇಕು ಎಂದು ನಮೂದಿಸಿಲ್ಲ ಎಂದು ಉತ್ತರಿಸಿರುತ್ತಾರೆ. ಸಿ ಎಸ್ ಎಂದರೆ ಸೆಕ್ಯೂರಿಟಿ ಬಾಂಡ್ ಎಂದು ಸುಳ್ಳಾಗಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ವಿರುದ್ಧ ಈ ಹಿಂದೆ ಸಾಲ ಕಟ್ಟು ಬಾಕಿ ಆದಾಗ ಪ್ರಕರಣ ದಾಖಲಿಸಿಲ್ಲ. ನಿಪಿ-6 ರಲ್ಲಿ ಹೇಳಿದ ನಾವು ಶಿಪಾರಸ್ಸು ಮಾಡಿದ ಸಂಗತಿ ಸುಳ್ಳು ಎಂದರೆ ಸರಿಯಲ್ಲ. ನಿಪಿ-6 ರಲ್ಲಿ ಹೇಳಿದ ಸಂಗತಿ ಸರಿಯಾಗಿದೆ. ಸಾಮಾನ್ಯವಾಗಿ ಸಾಲಗಾರನಿಂದ ಸಾಲ ಕಟ್ಟುಬಾಕಿ ಆದಾಗ ನಾವು ಪುನಃ ಸಾಲ ನೀಡುವುದಿಲ್ಲ. ಸದರಿ ಪ್ರಕರಣದಲ್ಲಿ ಆರೋಪಿಗೆ ಹೊಸದಾಗಿ ಸಾಲ ನೀಡಿದ್ದೆ ಇಲ್ಲ, ಹಿಂದಿನ ಸಾಲ ಕಟ್ಟು ಬಾಕಿ ಆದಾಗ ಸದರಿ ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಸದರಿ ಪ್ರಕರದಣಲ್ಲಿ ಹಾಜರುಪಡಿಸಿದ ಚೆಕ್ಕು ಹಿಂದಿನ ಸಾಲಕ್ಕೆ ಪಡೆದ ಚೆಕು್ಕ ಆಗಿದೆ ಎಂದರೆ ಸರಿಯಲ್ಲ. ಸಿಂಡಿಕೇಟಿ ಬ್ಯಾಂಕ್ ಕೆನರಾ ಬ್ಯಾಂಕಿನೊಂದಿಗೆ ವಿಲೀನ ಆಗುವ ಮೊದಲೇ ಚೆಕ್ಕನ್ನು ಆರೋಪಿಯು

ನೀಡಿದ್ದಾರೆ . ಸದರಿ ಚೆಕ್ಕು ಸಹ ಕಾನೂನು ಬದ್ದ ಚೆಕ್ಕು ಅಲ್ಲ ಎಂದರೆ ಸರಿಯಲ್ಲ. ಆರೋಪಿಯೂ



ಯಾವುದೇ ಅಪರಾಧ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಯಾವುದೇ ಹಣ ಮರುಪಾವತಿ ಮಾಡಲು ಬಾಧ್ಯಸ್ತನಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ**